ಇಂದು ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಬಿ ಎಂ ಹೆಚ್ ವಕೀಲರಿಂದಃ

ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಮೂಲತಃ ಹೊಂಡದ ಕುಟುಂಬದವರು ಎಂದರೆ ಸರಿ. 5 ನೇ ಪ್ರತಿವಾದಿ ಬೆಟಕೇರೂರು ಗ್ರಾಮದವರು ಎಂದರೆ ಸರಿ. ಪ್ರತಿವಾದಿ 6(ಎ) ದಿಂದ 9(ಡಿ) ಹಾಗೂ ನಾನು ಬಿಳಕಿ ಕುಟುಂಬದವರಾಗಿದ್ದು ನಾವು ಬೆಟಕೇರೂರ ಗ್ರಾಮಕ್ಕೆ ಸೇರಿದವರು ಎಂದರೆ ಸರಿ. 5 ನೇ ಪ್ರತಿವಾದಿ ಮತ್ತು ನಾವು ಕೇವಲ ಸಂಬಂದಿಗಳಾಗಿದ್ದು ದಾಯಾದಿಗಳು ಅಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಸೋದರತ್ತೆಯ ಮಗ 5 ನೇ ಪ್ರತಿವಾದಿ ಎಂದು ನುಡಿದಿರುತ್ತಾರೆ. ವಾದಿ ಮತ್ತು ಪ್ರತಿವಾದಿ 1 ರಿಂದ 4 ಮತ್ತು 6(ಎ) ದಿಂದ (ಡಿ) ರವರು ನಮಗೆ ದಾಯಾದಿಗಳು ಅಲ್ಲ ಎಂದರೆ ಸರಿ.

2. 5 ಮತ್ತು 6 ನೇ ಪ್ರತಿವಾದಿಯರು ವಾದಿಯ ತಂದೆ ಅಬಲೂರಪ್ಪನವರ ವಿರುದ್ಧ ದಾಖಲಿಸಿದ್ದ ದಾವೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 128/2000 ರಲ್ಲಿ ಪಡೆದುಕೊಂಡಂತಹ ರಾಜಿ ಅರ್ಜಿಗೆ ವಾದಿಯ ತಂದೆ ಅಬಲೂರಪ್ಪನವರ ಸಹಿ ಇಲ್ಲ ಎಂದರೆ ಸರಿ. ಅದೇ ರೀತಿ 5 ನೇ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ನನ್ನ ತಂದೆಯಾದ 6 ನೇ ಪ್ರತಿವಾದಿ ಹಾಗೂ 5 ನೇ ಪ್ರತಿವಾದಿಯರು ಅಸಲು ದಾವಾ ಸಂಖ್ಯೆ 128/2000 ರಲ್ಲಿ ಮಾಡಿಕೊಂಡಂತಹ ರಾಜಿ ಡಿಕ್ರಿ ವಾದಿಯ ಹಿಸ್ಸೆಯ ಮೇಲೆ ಬಾಂದಾಯಿಸುವುದಿಲ್ಲ ಎಂದರೆ ಸರಿಯಲ್ಲ. ನಾವು ವಾದಿಯರ ಕುಟುಂಬಕ್ಕೆ ಸಂಬಂದಪಟ್ಟಿದ್ದವನಲ್ಲದಿದ್ದರೂ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿ ಸುಳ್ಳು ರಾಜಿ ಡಿಕ್ರಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ಅಬುಲೂರಪ್ಪನವರು ಪ್ರತಿವಾದಿ 1 ರಿಂದ 4 ರವರ ತಂದೆಗೆ ಆಸ್ತಿ ಹಕ್ಕನ್ನು ಬಿಟ್ಟು ಕೊಟ್ಟ ಬಗ್ಗೆ ಮಾಹಿತಿ ಇರುತ್ತದೆ, ಆ ರೀತಿ ಮಾಹಿತಿ ಎಂದರೆ ಡ.ನಂ.2028 ರಲ್ಲಿ ನಮೂದಿಸಲಾಗಿರುತ್ತದೆ ಎಂದರು ನುಡಿದಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿ ಸುಳ್ಳು ಡಿಕ್ರಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು 25 ಸಾವಿರ ರೂಗಳನ್ನು ಬಸವಣ್ಣಪ್ಪ ರವರಿಗೆ ಕೊಟ್ಟು ನ್ಯಾಯಾಲಯದಿಂದ ಡಿಕ್ರಿಯನ್ನು ಭರಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ವಾದಿಯ ತಂದೆಗೆ ನಾನು ಹಣ ನೀಡಿರುವ ಬಗ್ಗೆ ಯಾವುದೇ ದಾಖಲೆಗಳಾಗಿಲೀ ಇರುವುದಿಲ್ಲ ಎಂದರೆ ಸಾಕ್ಷಿಯು ಡ. ದಲ್ಲಿ ನಮೂದಾಗಿರುತ್ತದೆ ಎಂದು

ನುಡಿದಿರುತ್ತಾರೆ. ವಾದಿಯ ತಂದೆಗೆ ನಾನು ಯಾವುದೇ ಹಣವನ್ನು ನೀಡಿರುವುದಿಲ್ಲ ಆ



ಕಾರಣದಿಂದ ವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಯರ ಹಿಸ್ಸೆ ಎತ್ತಿ ಹಾಕಬೇಕೆಂಬ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.